# 21. ಎಲ್ಲರ ಚಿತ್ತ ನಮ್ಮ ಸರ್ಕಾರಿ ಶಾಲೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕಲ್ಲಹಳ್ಳಿಯತ್ತ

ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮದಲ್ಲಿ 1960 ರಲ್ಲಿ ಪ್ರಾರಂಭವಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯು 1980 ರ ದಶಕದಲ್ಲಿ ಉನ್ನತೀಕರಣಗೊಂಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಾಗಿ ಮುಂದುವರೆದಿದೆ. ಗ್ರಾಮೀಣ ಪ್ರದೇಶದ ಈ ಶಾಲೆ ತಾಲ್ಲೂಕು ಕೇಂದ್ರದಿಂದ 12 ಕಿ.ಮೀ. ದೂರದಲ್ಲಿದ್ದು ಕಳೆದ ಎರಡು-ಮೂರು ವರ್ಷಗಳಿಂದ ಈ ಶಾಲೆಯು ಗಣನೀಯವಾಗಿ ಪ್ರಗತಿಯತ್ತ ಸಾಗುತ್ತಿದೆ. ವಿಶಾಲವಾದ ಮೈದಾನವನ್ನು ಹೊಂದಿರುವ ಈ ಶಾಲೆಯು ಎಲ್ಲರ ಗಮನ ಸೆಳೆಯುತ್ತದೆ. ಇದಕ್ಕೆ ಕಾರಣ ಇಲ್ಲಿಯ ಶಿಕ್ಷಕರ SDMCಯವರ ಪ್ರಾಮಾಣಿಕ ಪ್ರಯತ್ನ ಮತ್ತು ಬದ್ಧತೆ. ಗುಣಾತ್ಮಕ ಶಿಕ್ಷಣಕ್ಕೆ ಪೂರಕವಾದ ಅತ್ಯುತ್ತಮ ಸ್ಮಾರ್ಟ್ಕ್ಲಾಸ್ನ್ನು ತಾಲ್ಲೂಕಿನಲ್ಲೇ ಪ್ರಥಮವಾಗಿ ಪ್ರಾರಂಭಿಸಿದ ಶಾಲೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ವಿಶಾಲವಾದ ಕೊಠಡಿಯಲ್ಲಿನ ಸ್ಮಾರ್ಟ್ಕ್ಲಾಸ್ನಲ್ಲಿ ದೊಡ್ಡಸ್ಕ್ರೀನ್ನಲ್ಲಿ ಬಹುತೇಕ ಎಲ್ಲ ವಿಷಯಗಳಿಗೂ ಪೂರಕವಾದ ವೀಡಿಯೋ/ಆಡಿಯೋಗಳಿಂದ, ಅದರಲ್ಲೂ ENGLISH ಕಲಿಕೆಗೆ ಹೆಚ್ಚು ಒತ್ತು ನೀಡಿರುವುದು ಮಕ್ಕಳೂ ಹಾಗೂ ಪೋಷಕರನ್ನು ಶಾಲೆಯತ್ತ ಆಕರ್ಷಿಸಿದೆ. ಇದರೊಂದಿಗೆ ಕಂಪ್ಯೂಟರ್ ಶಿಕ್ಷಣ ನೀಡಲು ಕಂಪ್ಯೂಟರ್ಗಳನ್ನು ಪಡೆಯುವ ಸಲುವಾಗಿ SDMC ಸಭೆಯಲ್ಲಿ ತೀರ್ಮಾನಿಸಿದಂತೆ SDMC ಮತ್ತು ಶಿಕ್ಷಕರು "DXC ಟೆಕ್ನಾಲಜಿ" ಕಂಪನಿ ಬೆಂಗಳೂರು, ಇವರ ಶಿವಮೊಗ್ಗ ಶಾಖೆಯನ್ನು ಸಂಪರ್ಕಿಸಿ ಸಲ್ಲಿಸಿದ ಮನವಿಗೆ ಸದರಿ ಸಂಸ್ಥೆಯು ಶಿವಮೊಗ್ಗದ " ಬಾಲ್ಉತ್ಸವ್ " ಸಂಸ್ಥೆಯ ಸಹಯೋಗದಲ್ಲಿ ಶಾಲೆಗೆ ಭೇಟಿ ನೀಡಿ ಶಾಲೆಯನ್ನು ಮಾದರಿ ಶಾಲೆಯನ್ನಾಗಿಸಲು ಬೇಕಾದ ಅಗತ್ಯ ಸೌಕರ್ಯಗಳನ್ನು ಒದಗಿಸಲು ಒಪ್ಪಿಗೆನೀಡಿ, ಸದರಿ ಶಾಲೆಯನ್ನು ಮೂರು ವರ್ಷಗಳವರೆಗೆ ದತ್ತು ತೆಗೆದುಕೊಳ್ಳುವುದಾಗಿ ತೀರ್ಮಾನಿಸಿರುವುದು ಈ ಶಾಲೆಯ ಚಿತ್ರಣವನ್ನೇ ಬದಲಿಸಿದೆ.

ಈ ನಿಟ್ಟಿನಲ್ಲಿ 2019 ಮೇ ತಿಂಗಳಲ್ಲಿ ಶಾಲಾ ಕೊಠಡಿಗಳ ಕಿಟಕಿಬಾಗಿಲುಗಳ ದುರಸ್ಥಿಯೊಂದಿಗೆ ಗೋಡೆಗಳು ಮತ್ತು ಕಾಂಪೌಂಡ್ ಗೆ ಬಣ್ಣಬಳಿದು ಆಕರ್ಷಣೀಯಗೊಳಿಸಿರುತ್ತಾರೆ. ಎರಡು ಬೋಧನಾ ಕೊಠಡಿಗಳಿಗೆ ವಿದ್ಯುತ್ ಸಂಪರ್ಕದೊಂದಿಗೆ ಸ್ಮಾರ್ಟ ಕ್ಲಾಸ್ ಅಡವಳಿಕೆ , ಶೌಚಾಲಯಗಳ ನವೀಕರಣ, ಹೆಣ್ಣುಮಕ್ಕಳ ಶೌಚಾಲಯದಲ್ಲಿ ಪ್ಯಾಡ್ ಡಿಸ್ಪೋಸರ್ ಯಂತ್ರಗಳನ್ನು ಅಳವಡಿಸಿರುವುದು ಮಾದರಿಯಾಗಿದೆ. ಶಾಲಾಮಕ್ಕಳಿಗೆ ಶುದ್ಧಕುಡಿಯುವ ನೀರಿನ ಸೌಲಭ್ಯದಲ್ಲಿ 200 ಲೀಟರಿನ ವಾಟರ್ ಫಿಲ್ಟರ್ ಒದಗಿಸುತ್ತಾರೆ.

ಶಾಲಾ ಆವರಣದಲ್ಲಿ ಮಕ್ಕಳ ಆಟಕ್ಕಾಗಿ ಆಕರ್ಷಕವಾದ see saw, ಉಯ್ಯಾಲೆ ಇನ್ನಿತರೆ ಆಟಿಕೆಗಳನ್ನು ಜೋಡಿಸಿರುತ್ತಾರೆ. ಇವುಗಳನ್ನು ಬಳಸಿಕೊಳ್ಳುತ್ತಿರುವ ಮಕ್ಕಳು ಖುಷಿಪಡುತ್ತಿದ್ದಾರೆ. ಹಾಗೆಯೇ ಶಾಲೆಯ ಎಲ್ಲ ಮಕ್ಕಳಿಗೂ ಗುಣಮಟ್ಟದ ಶಾಲಾಬ್ಯಾಗ್, ಲೈಟ್ ವೈಟ್ ವಾಟರ್ ಬಾಟಲ್, ತರಗತಿಯ ಮಟ್ಟಕ್ಕೆ ತಕ್ಕಂತೆ 200 ಪುಟಗಳ ಸುಮಾರು 15-20 ಲಾಂಗ್ ನೋಟ್ ಬುಕ್ಕುಗಳನ್ನು, ಎರಡು ಜೊತೆ ಶೂ – ಸಾಕ್ಸ್ ಹಾಗೂ ಕಲರ್ ಝೆರಾಕ್ಸ್ ಪ್ರಿಂಟರನ್ನು ನೀಡಿರುತ್ತಾರೆ.

ಈ ಎಲ್ಲಾ ಶಾಲಾ ಭೌತಿಕ ಸೌಲಭ್ಯಗಳನ್ನು ಸಾಂಕೇತಿಕವಾಗಿ ಉದ್ಘಾಟಿಸುವ ಕಾರ್ಯಕ್ರಮವು ದಿನಾಂಕ:-10-06-2019 ರಂದು ಭದ್ರಾವತಿ ಕ್ಷೇತ್ರ ಸಂಪನ್ಮೂಲ ಕೇಂದ್ರದ ಮಾನ್ಯ ಸಮನ್ವಯಾಧಿಕಾರಿಗಳಾದ ಶ್ರೀ.ರಾಜಶೇಖರ್ AG, ಶಿಕ್ಷಣ ಇಲಾಖೆಯ ಮಾರ್ಗದರ್ಶಕರು, DXC ಟೆಕ್ನಾಲಜಿ ಕಂಪನಿ, ಬೆಂಗಳೂರು ಹಾಗೂ ಬಾಲ್ ಉತ್ಸವಿ ಶಿವಮೊಗ್ಗ – ಈ ಸಂಸ್ಥೆಗಳ ಮುಖ್ಯಸ್ಥರು ಮತ್ತು ಸಿಬ್ಬಂದಿ, SDMCಯವರು, ಪೋಷಕರು, ಗ್ರಾಮಸ್ಥರು, ಅಕ್ಕಪಕ್ಕದ ಶಾಲೆಗಳ ಶಿಕ್ಷಕರು ಮತ್ತು ಮಕ್ಕಳ ಉಪಸ್ಥಿತಿಯಲ್ಲಿ ಅದ್ದೂರಿಯಾಗಿ ನೆರವೇರಿಸಿರುತ್ತಾರೆ. ಇಂತಹ ಕಾರ್ಯಕ್ರಮಗಳು ಸರ್ಕಾರಿ ಶಾಲೆಗಳತ್ತ ಸಮುದಾಯದ ಗಮನವನ್ನು ಸೆಳೆದಿವೆ.

ಸದರಿ ಕಂಪನಿಯವರ ಕಾರ್ಯಕ್ರಮಗಳು ಮುಂದುವರೆದಿರುವುದು ಶಾಲೆಯ ಚಟುವಟಿಕೆಗಳನ್ನು ಕ್ರಿಯಾಶೀಲಗೊಳಿಸಿರುತ್ತವೆ. ಇಲ್ಲಿಯ ಮುಖ್ಯೋಪಾಧ್ಯಾಯರಾದ ಶ್ರೀ.ವಿ.ಹಿರೇಮಠ, ಸಹಶಿಕ್ಷಕರಾದ ಶ್ರೀ.ಇಬ್ರಾಹಿಂ, ಶ್ರೀ.ರಾಮಚಂದ್ರಪ್ಪ, ಶ್ರೀಮತಿ ಅಮುದಾ ಹಾಗೂ SDMC ಅಧ್ಯಕ್ಷರಾದ ಶ್ರೀ.ಸಂತೋಷ್ ಇವರು ಮುಂದುವರೆದು ದಾನಿಗಳನ್ನು ಮನವೊಲಿಸಿ ಶಾಲಾಮೈದಾನದಲ್ಲಿ ಆಕರ್ಷಣೀಯವಾದ ಧ್ವಜದಕಟ್ಟೆ ನಿರ್ಮಿಸಿರುವುದು ಶ್ಲಾಘನೀಯವಾಗಿದೆ. ಸಹಶಿಕ್ಷಕರಾದ ಶ್ರೀ.ಇಬ್ರಾಹಿಂರವರು ವಿವಿಧ ಕಲಿಕೋಪಕರಣ ತಯಾರಿಕೆಯಿಂದ ಮಕ್ಕಳಿಗೆ ಸುಲಭ ENGLISH ಕಲಿಕೆಗೆ ಶ್ರಮಿಸುತ್ತಿದ್ದಾರೆ. ಹಾಗೂ ಹೊಸ ಬೋಧನಾ ಕೊಠಡಿಗೆ ನಲಿಕಲಿ ತರಗತಿಯನ್ನು ಸ್ಥಳಾಂತರಿಸಿ, ಆಕರ್ಷಕವಾಗಿ ತರಗತಿ ಸಿದ್ಧಪಡಿಸಿರುತ್ತಾರೆ. ಮಕ್ಕಳಿಗೆ ರೌಂಡ್ ಟೇಬಲ್, ಚೇರ್ ವ್ಯವಸ್ಥೆ. ವಾಲ್ ಸ್ಲೇಟ್, ಕಾರ್ಡ್ ಜೋಡಣೆಗೆ

ಮಾಡಿಕೊಂಡಿರುವ ಸ್ಟ್ಯಾಂಡ್ ನಾವೀನ್ಯತೆಯಿಂದ ಕೂಡಿರುತ್ತದೆ. ಒಟ್ಟಾರೆ ಈ ಶಾಲೆಯ ಮಕ್ಕಳು ಕಲಿಕೆಯಲ್ಲಿ ಮುಂದಿದ್ದು, ಕ್ರೀಡೆ ಹಾಗೂ ಇನ್ನಿತರೆ ಸಹಪಠ್ಯ ಚಟುವಟಿಕೆಗಳಲ್ಲೂ ಮುಂದಿರುವುದು ಶಾಲೆಯು ಸರ್ವಾಂಗೀಣ ಪ್ರಗತಿಯತ್ತ ಸಾಗುತ್ತಿರುವುದನ್ನು ಸೂಚಿಸುತ್ತಿದೆ.

ಹೀಗೆ ಇನ್ನೂ ಹಲವಾರು ವೈಶಿಷ್ಟ್ಯತೆಗಳ ಮೂಲಕ "ಎಲ್ಲರಚಿತ್ತ – ಈ ನಮ್ಮ ಸರ್ಕಾರಿ ಶಾಲೆಯತ್ತ" ಅಂತಾಗಿರುವುದು ನಾವೆಲ್ಲರೂ ಹೆಮ್ಮೆ ಪಡುವ ವಿಷಯವೇ ಸರಿ.






ದಾನಿಗಳಿಂದ ನಿರ್ಮಾಣವಾದ ವಿಶಾಲ ಧ್ವಜಕಟ್ಟೆ.

ನಲಿ-ಕಲಿ ತರಗತಿಗೆ ಹೆಚ್ಚುವರಿಯಾಗಿ ಶಿಕ್ಷಕರೇ ತಯಾರಿಸಿ ಕೊಂಡ ಲ್ಯಾಮಿನೇಟೆಡ್ ಕಾರ್ಡ್ ಮತ್ತು ಮಿಂಚುಪಟ್ಟಿ & ಆಟಿಕೆಗಳು





ನಲಿ–ಕಲಿ ತರಗತಿ ಕೊಠಡಿಗೆ ಟೇಬಲ್ ಮತ್ತು ಚೇರುಗಳ ವ್ಯವಸ್ಥೆ & DXC TECHNOLOGY & BALL UTHSAV. ಸಂಸ್ಥೆಯವರ



# ಬದಲಾಯ್ತು ಕಲ್ಲಳ್ಳಿ ಸರ್ಕಾರಿ ಶಾಲೆ

## ಹೊಸ ರೂಪ ಕೊಟ್ಟ ಮುಖ್ಯ ಶಿಕ್ಷಕ, ಎಸ್‌ಡಿಎಂಸಿ | ಚಿಂತನೆ ಸಾಕಾರಗೊಳಿಸಿದ ಡಿಎಕ್ಸ್‌ಸಿ

ಬಸವರಾಜ್ ಭದ್ರಾವತಿ

ತಾಲೂಕಿನ ಕಲ್ಲಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಯಾವುದೇ ಖಾಸಗಿ ಶಾಲೆಗೆ ಕಡಿಮೆ ಇಲ್ಲದಂತೆ ಮಾದರಿ ಶಾಲೆಯಾಗಿ ರೂಪುಗೊಂಡಿದೆ.

ಖಾಸಗಿ ಶಾಲೆಗಳ ಭರಾಟೆಯಲ್ಲಿ ಸರ್ಕಾರಿ ಶಾಲೆಗಳ ಅಸ್ತಿತ್ವಕ್ಕೆ ಧಕ್ಕೆ ಬಂದಿದೆ. ಪಾಲಕರೂ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುವ ಮನೋಭಾವ ಬೆಳೆಸಿಕೊಳ್ಳುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಕಲ್ಲಳ್ಳಿ ಶಾಲೆ ಖಾಸಗಿ ಶಾಲೆಗೆ ಕಡಿಮೆ ಇಲ್ಲದಂತೆ ಅಗತ್ಯ ಸೌಕರ್ಯ ಹೊಂದಿ ಗುಣಮಟ್ಟದ ಶಿಕ್ಷಣ ನೀಡುತ್ತಿದೆ.

» ಕಂಪ್ಯೂಟರ್ ಶಿಕ್ಷಣ ವ್ಯವಸ್ಥೆ ಮಾಡಿದ ಮುಖ್ಯ ಶಿಕ್ಷಕ

» ಶಾಲೆಯಲ್ಲಿ ಶಿಕ್ಷಣಕ್ಕೆ ಪೂರಕ ವಾತಾವರಣ

ವಿವಿ ಫೋಕಸ್ ಸ್ಟೋರಿ

ಭದ್ರಾವತಿ ತಾಲೂಕಿನ ಕಲ್ಲಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ.

### ಮಕ್ಕಳಿಗೆ ಉತ್ತೇಜನ

### ಸ್ಮಾರ್ಟ್ ಕ್ಲಾಸ್

ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟ ಮಾಡುತ್ತಿರುವ ಮಕ್ಕಳು.

### ಎಲ್‌ಕೆಜಿ, ಯುಕೆಜಿ ಆರಂಭ

ಮಕ್ಕಳ ಶೈಕ್ಷಣಿಕ ಅನುಕೂಲಕ್ಕಾಗಿ ಪ್ರೊಜೆಕ್ಟರ್ ಅಳವಡಿಕೆ.

| ವಿ.ಹಿರೇಮಠ್ ಮುಖ್ಯ ಶಿಕ್ಷಕ

ಭೇಟಿ

GHPS ಕಲ್ಲಹಳ್ಳಿ ಶಾಲೆಯ ಅಭಿವೃದ್ಧಿಯ ಬಗ್ಗೆ ದಿನಪತ್ರಿಕೆಯಲ್ಲಿ ಮೂಡಿಬಂದ ಲೇಖನ.



ನೂತನ ತಂತ್ರಜ್ಞಾನದ ಮೂಲಕ ಬೋಧನೆ | ಶೈಕ್ಷಣಿಕ ವೀಡಿಯೋ ಮೂಲಕ ಮನವರಿಕೆ

# ಇಬ್ರಾಹಿಂ ಮೇಸ್ಟ್ರ ಪಾಠ ಅಂದ್ರೆ ಮಕ್ಕಳಿಗೆ ಪ್ರಾಣ

ವಿಜಯವಾಣಿ ಸುದ್ದಿಜಾಲ ಭದ್ರಾವತಿ

ಪ್ರಸ್ತುತ ಮೊಬೈಲ್ ಬಳಕೆಯ ಕಾಲಘಟ್ಟದಲ್ಲಿ ಮಕ್ಕಳಿಗೆ ಶಿಕ್ಷಣ ನೀಡುವುದು ಶಿಕ್ಷಕರ ದೊಡ್ಡ ಸಾಧನೆಯಾಗಿದೆ. ಪುಸ್ತಕ ಓದು, ಬರೆಯುವ ಪದ್ಧತಿ ಮರೆಯಾಗಿ ನೋಡಿ ಕಲಿ ಮಾಡಿ ತಿಳಿ ಎಂಬ ತತ್ವದ ಶಿಕ್ಷಣಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಲಾಗುತ್ತಿದೆ.

ಈಗಿನ ತಂತ್ರಜ್ಞಾನದ ಯುಗದಲ್ಲಿ ಶಾಲಾ ಮಕ್ಕಳಿಗೆ ದೊಡ್ಡ ಗಾತ್ರದ ಪರದೆ, ಅದರಲ್ಲಿ ಮೂಡಿ ಬರುವ ಚಿತ್ರಗಳು ಕಲಿಕೆಗೆ ಪೂರಕವಾಗಿವೆ. ಕಷ್ಟವಾದ ವಿಷಯಗಳನ್ನು ಸುಲಭವಾಗಿ ಮಕ್ಕಳಿಗೆ ಅರ್ಥೈಸಿ ಹೇಳುವಲ್ಲಿ ಯೂಟ್ಯೂಬ್ ನಂತಹ ಆ್ಯಪ್‌ಗಳು ಸಹಕಾರಿಯಾಗಿವೆ. ಮಕ್ಕಳು ಆಡುತ್ತಾ, ಹಾಡುತ್ತ ಸಂತೋಷವಾಗಿ ಸುಲಭವಾಗಿ ಕಲಿಯುತ್ತಾರೆ. ಶಿಕ್ಷಕರ ಪರಿಶ್ರಮ, ಉತ್ಸಾಹ ಹಾಗೂ ಪ್ರೋತ್ಸಾಹವೂ ಇರಬೇಕು.

| ಜಿ.ಪಿ.ಇಬ್ರಾಹಿಂ ಶಿಕ್ಷಕ

ಭದ್ರಾವತಿಯ ಕಲ್ಲಹಳ್ಳಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಮಾರ್ಟ್ ಟಿವಿ ಮೂಲಕ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಜಿ.ಪಿ.ಇಬ್ರಾಹಿಂ.






ಶಾಲಾ ಭೌತಿಕ ಪ್ರಗತಿಗೆ ದತ್ತು ಪಡೆದ DXC TECHNOLOGY & BALL UTHSAV. ಸಂಸ್ಥೆಯವರ ಉದ್ಘಾಟನಾ ಕಾರ್ಯಕ್ರಮಕ್ಕೆ ಹಾಜರಾದ ಶ್ರೀರಾಜಶೇಖರ್ ಎ ಜಿ., ಸಮನ್ವಯಾಧಿಕಾರಿಗಳು BRC, ಭದ್ರಾವತಿ ಇವರು ಈ ಶಾಲೆಯ ಅಭಿವೃದ್ಧಿಯ ಕುರಿತು ಮೆಚ್ಚುಗೆಯ






ಮಾತನಾಡಿದರು.

DXC TECHNOLOGY & BALL UTHSAV. ಸಂಸ್ಥೆಯವರು ನೀಡಿದ ಹೆಣ್ಣುಮಕ್ಕಳ ಹೈಟೆಕ್ ಶೌಚಾಲಯದಲ್ಲಿ ನ್ಯಾಪ್ಕಿನ್ ಮಿಷಿನ್ನಿನಿಂದ ನ್ಯಾಪ್ ಕಿನ್ ಪಡೆಯಲು ಬಳಸುವ ನಾಣ್ಯಗಳು & ಆಟಿಕೆಗಳು.





DXC TECHNOLOGY & BALL UTHSAV. ಸಂಸ್ಥೆಯವರು ನೀಡಿದ ಸ್ಮಾರ್ಟ್ ಕ್ಲಾಸ್ ವ್ಯವಸ್ಥೆ.